# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 678 (839) |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 10.03.2026 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ವಿವಿಧ ಯೋಜನಾ ಪ್ರಾಧಿಕಾರಗಳ (Planning Authorities) ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ಯಾವ ರೀತಿಯ ಅಭಿವೃದ್ಧಿ ಕಾಮಗಾರಿಗಳ ಕೈಗೊಳ್ಳುತ್ತಿದೆ; ಈ ಸಂಬಂಧ ಜಾರಿಯಲ್ಲಿರುವ ಮಾರ್ಗಸೂಚಿಗಳು, ಮಾನದಂಡಗಳು ಯಾವುವು; ಯಾವ ಅಂಶಗಳಿಗೆ ಆದ್ಯತೆ ನೀಡಲಾಗುತ್ತಿದೆ; | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ರಚಿಸಲಾಗಿರುವ ಯೋಜನಾ ಪ್ರಾಧಿಕಾರಗಳು ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ಹಾಗೂ ವಲಯ ನಿಯಮಾವಳಿಗಳಂತೆ ಭೂ ಮತ್ತು ಕಟ್ಟಡ ಅಭಿವೃದ್ಧಿಗಳಿಗೆ ಅನುಮೋದನೆ ನೀಡುವ ಕಾರ್ಯವನ್ನು ನಿರ್ವಹಿಸುತ್ತವೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 ರಡಿ ವಿನ್ಯಾಸಕ್ಕೆ ಅನುಮೋದನೆ ನೀಡಲಾಗುತ್ತದೆ.<br><br>ವಿನ್ಯಾಸ ಅನುಮೋದನೆ ಸಮಯದಲ್ಲಿ ಮಹಾಯೋಜನೆ ರಸ್ತೆ, ಬಡಾವಣೆ ರಸ್ತೆ, ಉದ್ಯಾನವನ, ನಾಗರೀಕ ಸೌಲಭ್ಯ ನಿವೇಶನ, ಇತ್ಯಾದಿಗಳನ್ನು ನಾಗರೀಕ ಸೌಲಭ್ಯ ಒದಗಿಸುವ ಉದ್ದೇಶದಿಂದ ಮೀಸಲಿಡಲಾಗುತ್ತದೆ.<br><br>ಖಾಸಗಿ ವಿನ್ಯಾಸಗಳಲ್ಲಿನ ಅಭಿವೃದ್ಧಿ ಕಾಮಗಾರಿಗಳನ್ನು ವಿನ್ಯಾಸದ ಮಾಲೀಕರು / ಅಭಿವೃದ್ಧಿದಾರರು ವಿನ್ಯಾಸದಲ್ಲಿ ನಾಗರೀಕ ಸೌಲಭ್ಯಗಳಾದ ರಸ್ತೆ, ಒಳಚರಂಡಿ, ಕುಡಿಯುವ ನೀರು, ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿ ಒದಗಿಸುತ್ತಾರೆ.<br><br>ಯೋಜನಾ ಪ್ರಾಧಿಕಾರಗಳಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಸಂಗ್ರಹವಾಗುವ ನಿಧಿಗಳ ಬಳಕೆಯ ಕುರಿತು ಸುತ್ತೋಲೆ ದಿನಾಂಕ:25.02.2026ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಅದರಂತೆ ಕ್ರಮವಹಿಸಲಾಗುತ್ತಿದೆ(ಸುತ್ತೋಲೆ ಪ್ರತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ).<br><br>ಯೋಜನಾ ಪ್ರಾಧಿಕಾರಗಳಲ್ಲಿ ವಿನ್ಯಾಸ ಅನುಮೋದನೆ ಸಮಯದಲ್ಲಿ ಪಾವತಿಸಿಕೊಳ್ಳಲಾಗುವ ಕೆರೆ ಅಭಿವೃದ್ಧಿ ಶುಲ್ಕಗಳನ್ನು ವಿನಿಯೋಗಿಸುವ ಕುರಿತು ದಿನಾಂಕ: 22.04.2025ರ ಸುತ್ತೋಲೆಯಲ್ಲಿ ಮಾರ್ಗಸೂಚಿ |
| (ಆ) | ರಾಜ್ಯದ ಮಹಾನಗರ ಪಾಲಿಕೆಗಳು, ಸ್ಥಳೀಯ ನಗರ ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಆಯಾ ಸ್ಥಳೀಯ ಯೋಜನಾ ಪ್ರಾಧಿಕಾರಿಗಳು ನಾಗರೀಕ ಸೌಲಭ್ಯಗಳನ್ನು ಒದಗಿಸಲು ಅವಕಾಶವಿದೆಯೇ; ಎಷ್ಟು ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಲಾಗಿದೆ; | |

| | | |
|---|---|---|
| | | ಹೊರಡಿಸಲಾಗಿದೆ. ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ. (ಸುತ್ತೋಲೆ ಪ್ರತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ)<br><br>ನಗರ / ಗ್ರಾಮೀಣ ಸ್ಥಳೀಯ ಸಂಸ್ಥೆಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ನಾಗರೀಕ ಸೌಲಭ್ಯಗಳನ್ನು ಒದಗಿಸುವ ಕಾರ್ಯವನ್ನು ನಿರ್ವಹಿಸುತ್ತವೆ. |
| (ಇ) | ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಈವರೆಗೆ ಯಾವ ಯಾವ ನಾಗರೀಕ ಸೌಲಭ್ಯಗಳಾದ ರಸ್ತೆ, ಒಳಚರಂಡಿ, ಕುಡಿಯುವ ನೀರು, ವಿದ್ಯುತ್, ಉದ್ಯಾನವನ, ಸಮುದಾಯ ಭವನ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; | ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಯೋಜನಾ ಪ್ರಾಧಿಕಾರಿಗಳ ವರದಿಯಂತೆ ಪುತ್ತೂರು ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಜಂಕ್ಷನ್ ಅಭಿವೃದ್ಧಿಗಾಗಿ ರೂ.50 ಲಕ್ಷಗಳ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br><br>ಉಳಿದಂತೆ, ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ, ಬಂಟ್ವಾಳ ಮತ್ತು ಸುಳ್ಯ ಹಾಗೂ ಉಡುಪಿ ಜಿಲ್ಲೆಯ ಕಾಪು ಮತ್ತು ಕುಂದಾಪುರ ಯೋಜನಾ ಪ್ರಾಧಿಕಾರಗಳಲ್ಲಿ ಯಾವುದೇ ಅಭಿವೃದ್ಧಿ ಕೈಗೊಂಡಿರುವುದಿಲ್ಲ. |
| (ಈ) | ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಈವರೆಗೆ ಬಿಡುಗಡೆಯಾಗಿರುವ ಒಟ್ಟು ಅನುದಾನ ಎಷ್ಟು; ಯೋಜನಾ ಪ್ರಾಧಿಕಾರಗಳ ಸ್ವಂತ ಆದಾಯವೆಷ್ಟು; ಇದರಲ್ಲಿ ಬಳಕೆಯಾಗಿರುವ ಮೊತ್ತ ಹಾಗೂ ಬಾಕಿಯಿರುವ ಮೊತ್ತ ಎಷ್ಟು; ಬಾಕಿಯಿರುವ ಮೊತ್ತವನ್ನು ಯಾವಾಗ ಉಪಯೋಗಿಸಲಾಗುವುದು; | ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಈವರೆಗೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.<br><br>ಯೋಜನಾ ಪ್ರಾಧಿಕಾರಗಳ ಸ್ವಂತ ಆದಾಯ, ಬಳಕೆಯಾಗಿರುವ ಮೊತ್ತ ಹಾಗೂ ಬಾಕಿ ಇರುವ ಮೊತ್ತದ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |
| (ಉ) | ಮುಂದಿನ ಅವಧಿಯಲ್ಲಿ ಸ್ಥಳೀಯ ಯೋಜನಾ ಪ್ರಾಧಿಕಾರಿಗಳ ಮೂಲಕ ನಾಗರೀಕ ಸೌಲಭ್ಯಗಳ ಅಭಿವೃದ್ಧಿಗೆ ಪ್ರಮಾಣೀಕೃತ ಮಾರ್ಗಸೂಚಿಗಳನ್ನು (ಎಸ್.ಓ.ಪಿ) ರಚಿಸಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಸರ್ಕಾರ ಯಾವ ರೀತಿ ಕ್ರಮವಹಿಸುತ್ತಿದೆ? | ಯೋಜನಾ ಪ್ರಾಧಿಕಾಗಳಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಸಂಗ್ರಹವಾಗುವ ನಿಧಿಗಳ ಬಳಕೆಯ ಕುರಿತು ಅಧಿಸೂಚನೆ ದಿನಾಂಕ:25.02.2026 ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಅದರಂತೆ ಕ್ರಮವಹಿಸಲಾಗುತ್ತಿದೆ. |

ಕಡತ ಸಂಖ್ಯೆ: ನಅಇ 78 ಮೈಅಪ್ರಾ 2026

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು.

ಅನುಬಂಧ-1

**GOVERNMENT OF KARNATAKA**

No. UDD 25 TTP 2025(E)

Karnataka Government Secretariat,
Vikasa Soudha,
Dr. B.R. Ambedkar Veedhi,
Bengaluru, date:25.02.2026

**CIRCULAR**

**Sub:** Guidelines regarding utilization of funds generated in Planning Authorities under various heads.

**Ref:**
1. Government circular No: UDD 4 TTP 2019 Dated:03.06.2019.
2. Government Notification No. UDD 3 TTP 2015 Dated: 25.02.2020.
3. Government Notification No. UDD 23 TTP 2020 Dated: 21.06.2021.
4. Government Notification No. UDD 4 TTP 2024 Dated: 11.03.2024.

*******

In the circular under reference, specific instructions were issued, to ensure proper financial administration and to effectively utilize the financial resources of the Planning Authorities (Including Municipal Planning Authorities) in order to achieve the objectives of the Karnataka Town and Country Planning Act, 1961, in exercise of powers conferred under Section 68-A(2) & 76-K of the Karnataka Town and Country Planning Act.

However it is necessary to simplify the guidelines and issue directions in accordance with the Karnataka Planning Authorities Rules, 1965 .Hence, the Government hereby issues the following revised guidelines.

The revised guidelines are applicable to all Municipal Planning Authorities and Planning Authorities (excluding planning authorities within the Bengaluru Metropolitan Region including GBA, BIAAPA, BMICAPA, Mysuru Development Authority and all the Urban Development Authorities) in the State.

The amount generated from various heads of Planning Authority the Karnataka Town & Country Planning Act, 1961 and the related rules shall be credited in accordance with the section 68-A of the Karnataka Town & country Planning Act, 1961 to a fund to be called the "PLANNING AUTHORITY

FUND." The Authority shall generate and utilize the fund in the following manner.

The Authority shall maintain proper accounts of all receipts credited to the Planning Authority Fund and ensure that the Fund is utilized solely for purposes specified under the Act.

**1.Receipts of the Planning Authorities:**

(i) Fee collected under Section 18(1) of the KTCP Act,1961
(ii) Supervision charges (in case of municipal planning authorities);
(iii) Scrutiny fee collected under KTCP Act, 1961;
(iv) Lake Rejuvenation Fee collected under Section 18(1A) of the KTCP Act,1961:
(v) cess and surcharge on the fees collected under Section 18(1) of the Karnataka Town and Country Planning (KTCP) Act, 1961
(vi) Amount generated from the allotment or renewal of Civic Amenity (CA) sites in private layouts on lease basis.
(vii) Amount generated from the rent or lease of commercial complexes, commercial establishments, lands, and buildings belonging to the Authority.
(viii) Amount generated through Premium Floor Area Ratio (P FAR) as per the provisions of the relevant Acts and Rules.
(ix) Funds collected in lieu of park and open spaces as per Government Notification No. UDD 522 MYAPRA 2005 dated 10.03.2006.
(x) Presently if any planning authority is permitted to collect the fees in lieu of park and open space.

**FUND-I:General Expenditure.**

| NAME OF THE FUND | GENERATION | UTILIZATION |
|---|---|---|
| **A. General Administration, Preparation and implementation of Masterplan** | **One-third of the fee collected as under.**<br>(i) Fee collected under Section 18(1) of the KTCP Act,1961<br>(ii) Supervision charges (in case of municipal planning authorities);<br>(iii) Scrutiny fee collected under KTCP Act, 1961<br>(iv) 5% Service charge retained from slum improvement cess | The Amount generated from (i) to (ix) shall be utilised for;<br>(i) General Office Administration including salary and Fee towards auditor and such other administrative expenditure;<br>(ii) Capacity building;<br>(iii) Office site |

| | | |
|---|---|---|
| | collected<br>(v) 5% Service charge retained from water supply cess collected;<br>(vi) 5% Service charge retained from ring road surcharge collected;<br>(vii) 5% Service charge retained from MRTS surcharge collected;<br>(viii) Any other statutory fee/imposts collected under the directions of the Government:<br>(ix) Interests accrued from (i) to (viii) above. | purchase, Office building construction and maintenance;<br>(iv) Master plan preparation and Revision including studies and surveys;<br>(v) Studies and surveys related to taking up any scheme; |
| **B. Acquisition of lands for Masterplan implementation** | **One-third of the fee collected as under;**<br>(i) Fee collected under Section 18(1) of the KTCP Act, 1961<br>(ii) Supervision charges (in case of municipal planning authorities);<br>(iii) Scrutiny fee collected under KTCP Act, 1961;<br>(iv) 5% Service charge retained from slum improvement cess collected;<br>(v) 5% Service charge retained from water supply cess collected;<br>(vi) 5% Service charge retained from ring road surcharge collected;<br>(vii) 5% Service charge retained from MRTS surcharge collected;<br>(viii) Any other statutory fee/imposts collected under the directions of the Government: | (i) Acquisition of land reserved for parks and open spaces, public and semi public, public utility and roads in the approved master plans; |

| | | |
|---|---|---|
| | (ix) Interests accrued from (i) to (viii) above. | |
| **C. Town Planning Schemes and other infrastructure development** | **One-third of the fee collected as under;**<br>(i) Fee collected under Section 18(1) of the KTCP Act,1961<br>(ii) Supervision charges (in case of municipal planning authorities);<br>(iii) Scrutiny fee collected under KTCP Act, 1961;<br>(iv) 5% Service charge retained from slum improvement cess collected;<br>(v) 5% Service charge retained from water supply cess collected;<br>(vi) 5% Service charge retained from ring road surcharge collected;<br>(vii) 5% Service charge retained from MRTS surcharge collected;<br>(viii) Any other statutory fee/imposts collected under the directions of the Government:<br>(ix) Interests accrued from (i) to (viii) above. | **(i)** Town planning schemes and any other schemes of the authority and also the infrastructuredevelopment works including water supply, UGD, junction improvements, providing street lights, installation of CCTV cameras, traffic kiosks, signal lights , Arches etc., proposed by the Local Authorities related to urban amenities. |
| | **Note**: Five percent (5%) of the fees collected under Section 18(1) of the Karnataka Town and Country Planning (KTCP) Act shall be transferred to the Karnataka State Town Planning Board. | |

**3. FUND-II: Lake Rejuvenation:**

| NAME OF THE FUND | GENERATION | UTILIZATION |
|---|---|---|

| | | |
|---|---|---|
| **Lake Rejuvenation:** | (i) Lake Rejuvenation Fee collected under Section 18(1A) of the KTCP Act,1961:<br>(ii) Interest accrued from above (i). | a) Development and rejuvenation of existing water bodies.<br>b) Formation of water bodies (tanks, wells etc.,)<br>c) Rejuvenation of extinct Kalyanis and public wells<br>d) Administrative expenses, charges towards studies and surveys, preparation of Detailed Project Reports (DPR).<br>e) If no water bodies are available within the Local Planning Area, alternative initiatives such as channelizing natural nalas to connect with potential water bodies, and implementing groundwater recharge measures through check dams, formation of water bodies (tanks, wells etc.) etc., may be undertaken. |

**4. FUND-III: Levy and collection of Cess & Surcharge:**

| **NAME OF THE FUND** | **GENERATION** | **UTILIZATION** |
|---|---|---|
| **Levy and collection of cess and surcharge** | (i) Cess for implementing water supply schemes.<br>(ii) Surcharge for the formation of a ring road.<br>(iii) Cess for slum improvement works.<br>(iv) Surcharge for establishing a mass rapid transport system. | Out of the total cess and surcharge collected, 95% shall be utilised exclusively for the specific purposes mentioned below subject to any directions issued by the State Government with regards to the mechanism for collection, accounting, distributions and usage of the cess and surcharge under the "Urban transport and infrastructure fund" |

| | | |
|---|---|---|
| | | (i) Cess collected for implementing water supply schemes shall be transferred to the respective Local body for carrying out water supply schemes and operation or maintenance .<br>(ii) Surcharge for the formation of a ring road shall be utilised by the Urban Development Authorities for the formation and development of ring roads<br>(iii) Cess for slum improvement works shall be transferred to the Karnataka Slum Development Board for the improvement and upgradation of slum areas.<br>(iv) Surcharge collected only in the Local Planning Areas where MTRS projects have been taken up for implementation for establishing a mass rapid transport system shall be transferred to the respective agency for the establishment of a Mass Rapid Transport System (MRTS) |
| | **Note:**The remaining 5% of the total cess and surcharge collected shall be transferred to Fund-I. | |

## 5. FUND-IV: Schemes and Infrastructure Development

| NAME OF THE FUND | GENERATION (a) | UTILIZATION (b) |
|---|---|---|
| **Scheme and Development** | (i) Amount generated from the allotment or renewal of Civic | **A.** 75% of the total funds generated under **(a)** (i) to (iii) in a financial year |

| | | |
|---|---|---|
| | Amenity (CA) sites in private layouts on lease basis.<br>(ii) Amount generated from the rent or lease of commercial complexes, commercial establishments, lands, and buildings belonging to the Authority.<br>(iii) interests accrued from (i) to (ii) above.<br>(iv) Amount generated through Premium Floor Area Ratio (P FAR) as per the provisions of the relevant Acts and Rules.<br>(v) Funds collected in lieu of park and open spaces as per Government Notification No. UDD 522 MYAPRA 2005 dated 10.03.2006.<br>(vi) Presently if any planning authority is permitted to collect the fees in lieu of park and open space.<br>(vii) Interest generated from (v) &(vi) above. | shall be exclusively utilized for.-<br>(i) Formulation and implementationof Town Planning Schemes;<br>(ii) Acquisition and development of areas designated for parks and open spaces as indicated in the Master Plan.<br>**B.** **25%** of the total funds generated under **(a)** (i) to (iii) in the current financial year may be utilized for development work relating to providing Civic amenities, infrastructure development, street lights, Arch etc, in the Local Planning Area limits.<br>**C.** The funds generated under **(a)** (iv) as Premium FAR charges shall be utilised in accordance with the Government Notification No.UDD 9 TTP 2020, dated 16.06.2020 as under.<br>(i) 50% of the premium FAR charges shall be utilise for the purpose of acquiring land shifting of utilities related to the purposes for which FAR is issued<br>(ii) 50% of the charges shall be utilised for developing infrastructure related to the purpose for which |

| | | |
|---|---|---|
| | | FAR is issued.<br>Provided any subsequent amendments to the Premium FAR rules related to utilisation of premium FAR charges shall be applicable.<br>**D.** Fund **(a)** (v) to (vii) collected as park & open space exemption fee shall be utilized as under.-<br>(i) For acquiring land reserved for parks and open spaces in the master plan.<br>(ii) For development of existing parks within jurisdiction of the Planning Authority & the Local Authorities within the Local Planning Area. |

It is hereby directed that all the Municipal Planning Authorities, Planning Authorities (excluding GBA, BDA ,BMRDA ,BMICAPA ,Mysuru Development Authority and all the Urban Development Authorities) while preparing their actual estimate of income and expenditure (budget) shall strictly ensure that the above guidelines are adhered to while allotting/ taking up of any development work/estimating expenditure and the Member Secretary of the concerned Planning Authority shall certify that the budget is prepared as per the above guidelines while submitting it for the approval of Commissioner Urban Development Authorities and Town and Country Planning Commissionerate.

25/02/26

**(LATHA.K)**
Under Secretary to Government
Urban Development Department

**To:**

1) Commissioner Urban Development Authorities and Town and Country Planning Commissionerate.
2) Director, Town and Country Planning Department
3) All the Member Secretaries, Planning Authorities (Through DTCP).
4) All the Chief officers Municipal Planning Authorities
5) SGF/Spare Copies.

ಅನುಬಂಧ -2

**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 186 ಮೈಅಪ್ರಾ 2025 (ಇ)

ಕರ್ನಾಟಕ ಸರ್ಕಾರದ, ಸಚಿವಾಲಯ.
ವಿಕಾಸ ಸೌಧ, 4ನೇ ಮಹಡಿ,
ಬೆಂಗಳೂರು, ದಿನಾಂಕ:22.04.2025

## ಸುತ್ತೋಲೆ

**ವಿಷಯ:** ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು / ಯೋಜನಾ ಪ್ರಾಧಿಕಾರಗಳು/ ಪುರಸಭಾ ಯೋಜನಾ ಪ್ರಾಧಿಕಾರಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 18 (1-A) ರಡಿಯಲ್ಲಿ ಪಾವತಿಸಿಕೊಳ್ಳುವ ಕೆರೆ ಪುನರುಜ್ಜೀವನ ಶುಲ್ಕವನ್ನು ವಿನಿಯೋಗಿಸುವ ಬಗ್ಗೆ ಮಾರ್ಗಸೂಚಿ.

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 36 ಗುಅಪ್ರಾ2015, ದಿನಾಂಕ: 04.08.2015.

*****

ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು/ ಯೋಜನಾ ಪ್ರಾಧಿಕಾರಗಳು/ ಪುರಸಭಾ ಯೋಜನಾ ಪ್ರಾಧಿಕಾರಗಳಲ್ಲಿ ಸಂಗ್ರಹಿಸಲಾಗುತ್ತಿರುವ ಕೆರೆ ಪುನರುಜ್ಜೀವನ ಶುಲ್ಕವನ್ನು ವಿನಿಯೋಗಿಸಲು ಉಲ್ಲೇಖಿತ ಸುತ್ತೋಲೆಯಲ್ಲಿ ಮಾರ್ಗ ಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಸದರಿ ಸುತ್ತೋಲೆ ಅನುಸಾರ ಕೆರೆ ಪುನರುಜ್ಜೀವನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸುತ್ತೋಲೆಯಲ್ಲಿನ ಮಾರ್ಗಸೂಚಿಗಳು ಸುಧೀರ್ಘ ಪ್ರಕ್ರಿಯೆಗಳನ್ನು ಒಳಗೊಂಡಿರುವುದರಿಂದ ವಿಳಂಬಕ್ಕೆ ಕಾರಣವಾಗುತ್ತಿರುವುದಾಗಿ ವಿವಿಧ ಪ್ರಾಧಿಕಾರಗಳಿಂದ ವರದಿಗಳನ್ನು ಸ್ವೀಕರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಉಲ್ಲೇಖಿತ ಸುತ್ತೋಲೆಯಲ್ಲಿನ ವಿಳಂಬಕ್ಕೆ ಕಾರಣವಾಗುವ ಅಂಶಗಳನ್ನು ಸರಳೀಕರಣಗೊಳಿಸಿ ಮಾರ್ಪಡಿತ ಮಾರ್ಗಸೂಚಿಗಳನ್ನು ಹೊರಡಿಸುವುದು ಅವಶ್ಯಕವಾಗಿರುತ್ತದೆ.

ಮಾರ್ಪಡಿತ ಮಾರ್ಗಸೂಚಿಗಳನ್ವಯ ಕೆರೆ ಪುನರುಜ್ಜೀವನ ಕಾಮಗಾರಿಗಳನ್ನು ನಗರಾಭಿವೃದ್ಧಿ ಪ್ರಾಧಿಕಾರಗಳು/ ಯೋಜನಾ ಪ್ರಾಧಿಕಾರಗಳು/ ಪುರಸಭಾ ಯೋಜನಾ ಪ್ರಾಧಿಕಾರಗಳಿಂದ ತ್ವರಿತವಾಗಿ ಹಾಗೂ ಸುಗಮವಾಗಿ ಕೈಗೆತ್ತಿಕೊಳ್ಳಲು ಅನುಕೂಲವಾಗುವಂತೆ ಹಾಗೂ ಕೆರೆಅಭಿವೃದ್ಧಿಗೆ ಸಂಬಂಧಪಟ್ಟಂತೆ ವಿವಿಧ ಇಲಾಖೆಗಳು/ಮಂಡಳಿಗಳು ನೀಡಬೇಕಾಗಿರುವ ನಿರಾಕ್ಷೇಪಣಾ ಪತ್ರಗಳನ್ನು ನಿಗಧಿತ ಕಾಲಮಿತಿಯಲ್ಲಿ ಒಂದೇ ಸೂರಿನಡಿ ಒದಗಿಸಿಕೊಡುವ ಉದ್ದೇಶದಿಂದ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಏಕ ಗವಾಕ್ಷಿ ಸಮಿತಿಯನ್ನು ರಚಿಸಲಾಗಿದೆ:

| | | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಸದಸ್ಯರು |
| 3 | ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯ ಆಯುಕ್ತರು/ ಮುಖ್ಯಾಧಿಕಾರಿಗಳು | ಸದಸ್ಯರು |
| 4 | ಕಾರ್ಯಪಾಲಕ ಅಭಿಯಂತರರು,ಸಣ್ಣ ನೀರಾವರಿ ಇಲಾಖೆ. | ಸದಸ್ಯರು |
| 5 | ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಪ್ರತಿ ನಿಧಿ | ಸದಸ್ಯರು |
| 6 | ಜಿಲ್ಲಾ ಭೂ ದಾಖಲೆಗಳ ಉಪ ನಿರ್ದೇಶಕರು. | ಸದಸ್ಯರು |

| | | |
|---|---|---|
| 7 | ಜಿಲ್ಲಾ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ | ಸದಸ್ಯರು |
| 8 | ಜಿಲ್ಲಾ ಉಪ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ. | ಸದಸ್ಯರು |
| 9 | ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು/ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು. | ಸಂಚಾಲಕರು |

ಮೇಲ್ಕಂಡ ಏಕಗವಾಕ್ಷಿ ಸಮಿತಿಯ ಕರ್ತವ್ಯ ಹಾಗೂ ಜವಾಬ್ದಾರಿಗಳು ಈ ಕೆಳಕಂಡಂತಿರುತ್ತವೆ:

1. ನಗರಾಭಿವೃದ್ಧಿ ಪ್ರಾಧಿಕಾರಗಳು/ ಯೋಜನಾ ಪ್ರಾಧಿಕಾರಗಳು/ ಪುರಸಭಾ ಯೋಜನಾ ಪ್ರಾಧಿಕಾರಗಳ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ಮಾತ್ರ ಆಯ್ಕೆ ಮಾಡತಕ್ಕದ್ದು.

2. ಕೆರೆಗಳನ್ನು ಆಯ್ಕೆ ಮಾಡುವಾಗ ಕುಡಿಯುವ ನೀರಿಗೆ ಬಳಸುವ ಉದ್ದೇಶಕ್ಕೆ ಆದ್ಯತೆ ನೀಡತಕ್ಕದ್ದು.

3. ಕೆರೆಯ ಮಾಲೀಕತ್ವ ಹೊಂದಿರುವ ಇಲಾಖೆ /ಮಂಡಳಿ /ಸ್ಥಳೀಯ ಸಂಸ್ಥೆಗಳು ಕಂದಾಯ ದಾಖಲೆಗಳನ್ವಯ ಕೆರೆಯ ವಿಸ್ತೀರ್ಣಕ್ಕೆ ಅನುಗುಣವಾಗಿ ಗಡಿಗಳನ್ನು ಗುರುತಿಸಿ, ಯಾವುದೇ ಒತ್ತುವರಿ ಆಗಿದ್ದಲ್ಲಿ, ತೆರವುಗೊಳಿಸಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅಭಿವೃದ್ಧಿಗಾಗಿ ಹಸ್ತಾಂತರಿಸಲು ಕ್ರಮವಹಿಸತಕ್ಕದ್ದು.

4. ಕಲ್ಮಶ/ತ್ಯಾಜ್ಯದಿಂದ ಕಲುಷಿತಗೊಂಡ ಕೆರೆಗಳಿದ್ದಲ್ಲಿ ಸದರಿ ಕೆರೆಯ ಲಭ್ಯ ನೀರಿನ ಗರಿಷ್ಠ ಬಳಕೆಗೆ ಅನುಗುಣವಾಗಿ ಆದ್ಯತೆ ನೀಡುವುದು.

5. ಆಯ್ಕೆ ಮಾಡಿದ ಕೆರೆಗೆ ಸಂಬಂಧಿಸಿದಂತೆ ವಿವಿಧ ಕಾಮಗಾರಿಗಳಾದ ತಡ ಬೇಲಿ ನಿರ್ಮಾಣ, ಕೆರೆ ಹೂಳು ತೆಗೆಯುವುದು ಮತ್ತು ಕೆರೆಯ ನೀರಿನ ಸಂಗ್ರಹಣೆ ಹೆಚ್ಚಿಸುವ ನಿಟ್ಟಿನಲ್ಲಿ ಅಂತರ್ ಜಲವನ್ನು ಮರು ಪೂರ್ಣಗೊಳಿಸುವುದು, ಕೆರೆ ಒತ್ತುವರಿ ತಡೆಯಲು ಅಗತ್ಯ ಗಿಡ ಮರಗಳನ್ನು ಕೆರೆಯ ಎಲ್ಲೆಯಲ್ಲಿ ಬೆಳಸುವುದು, ಕೆರೆ ನೀರಿನ ಶುದ್ಧೀಕರಣ, ನೀರಿನ ಗುಣ ಮಟ್ಟವನ್ನು ಸುಧಾರಿಸುವುದು, ಕೊಳಚೆ ನೀರು ಕೆರೆಗೆ ಸೇರದಂತೆ ತಡೆಯುವ ಕಾಮಗಾರಿ, ವಾಯು ವಿಹಾರಕ್ಕೆ ಅಗತ್ಯವಿರುವ ಪಾದಚಾರಿ ಮಾರ್ಗ, ಪ್ರವಾಸೋದ್ಯಮ ಉತ್ತೇಜಿಸುವ ಕಾಮಗಾರಿಗಳು ಹಾಗೂ ಇನ್ನಿತರ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಾಧಿಕಾರಗಳಿಗೆ ಮಾರ್ಗದರ್ಶನ ನೀಡತಕ್ಕದ್ದು.

6. ಸಮಿತಿಯು ಪ್ರಾಧಿಕಾರಗಳಿಗೆ ವಿಸ್ತೃತ ಯೋಜನಾ ವರದಿ (DPR) ತಯಾರಿಸಲು ಅಗತ್ಯ ಸಲಹೆ/ಸೂಚನೆಗಳನ್ನು ನೀಡುವುದು.

ಏಕಗವಾಕ್ಷಿ ಸಮಿತಿಯು ಆಯ್ಕೆ ಮಾಡುವ ಕೆರೆ ಹಾಗೂ ನೀಡಿರುವ ಸಲಹೆ/ ಸೂಚನೆಗಳನ್ನು ಪರಿಗಣಿಸಿ, ಕೆರೆಯ ಪುನರುಜ್ಜೀವನ ಹಾಗೂ ಸಂರಕ್ಷಣೆಗಾಗಿ ವಿಸ್ತೃತ ಯೋಜನಾ ವರದಿ(DPR) ಯನ್ನು ಸಂಬಂಧಿಸಿದ ನಗರಾಭಿವೃದ್ಧಿ ಪ್ರಾಧಿಕಾರಗಳು, ಯೋಜನಾ ಪ್ರಾಧಿಕಾರಗಳು ಹಾಗೂ ಪುರಸಭೆ ಯೋಜನಾ ಪ್ರಾಧಿಕಾರಗಳು ಸಿದ್ಧಪಡಿಸಿ, ಅಗತ್ಯ ದಾಖಲಾತಿಗಳೊಡನೆ ಸರ್ಕಾರದ ಪೂರ್ವಾನುಮತಿಗಾಗಿ ಸಲ್ಲಿಸತಕ್ಕದ್ದು.

ಸರ್ಕಾರದ ಪೂರ್ವಾನುಮತಿ ಪಡೆದ ನಂತರ, ಉದ್ದೇಶಿತ ಕೆರೆ ಸಂರಕ್ಷಣೆ ಹಾಗೂ ಪುನರುಜ್ಜೀವನ ಕಾಮಗಾರಿಗಳನ್ನು KTPP ಕಾಯ್ದೆ ಹಾಗೂ ಇತರೆ ನಿಯಮಗಳ ಅನುಸಾರ ಎಲ್ಲಾ ಪ್ರಕ್ರಿಯೆಗಳನ್ನು ಚಾಚೂತಪ್ಪದೆ ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳು, ಯೋಜನಾ ಪ್ರಾಧಿಕಾರಗಳು ಹಾಗೂ ಪುರಸಭೆ ಯೋಜನಾ ಪ್ರಾಧಿಕಾರಗಳು ಕೆರೆ ಪುನರುಜ್ಜೀವನ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

22/04/25

**(ಲತಾ ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

**ಇವರಿಗೆ,**

ಸಂಕಲನಾಕಾರರು, ಕರ್ನಾಟಕ ಇ-ರಾಜ್ಯಪತ್ರ – ಸದರಿ ಸುತ್ತೋಲೆಯನ್ನು ಕರ್ನಾಟಕ ಇ-ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಕೋರಿದೆ.

**ಪ್ರತಿ:**

1. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
3. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಆಯುಕ್ತರು, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
5. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
6. ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಯ ಆಯುಕ್ತರು/ ಮುಖ್ಯಾಧಿಕಾರಿಗಳು
7. ರಾಜ್ಯದ ಎಲ್ಲಾ ವಿಭಾಗೀಯ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ.
8. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ನೆಲ ಮಹಡಿ. ಬೀಜ ಭವನ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು– 560024
9. ಜಿಲ್ಲಾ ಭೂ ದಾಖಲೆಗಳ ಉಪ ನಿರ್ದೇಶಕರುಗಳು.
10. ಜಿಲ್ಲಾ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ
11. ಜಿಲ್ಲಾ ಉಪ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ.
12. ಸದಸ್ಯ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳು.

# ಅನುಬಂಧ - 3

## ಯೋಜನಾ ಪ್ರಾಧಿಕಾರಗಳ ಸ್ವಂತ ಆದಾಯ, ಬಳಕೆಯಾಗಿರುವ ಮೊತ್ತ ಹಾಗೂ ಬಾಕಿ ಇರುವ ಮೊತ್ತದ ವಿವರ

| ಕ್ರ.ಸಂ. | ಯೋಜನಾ ಪ್ರಾಧಿಕಾರ | ಒಟ್ಟು ಆದಾಯ (ರೂ.ಗಳಲ್ಲಿ) | ಬಳಕೆಯಾಗಿರುವ ಮೊತ್ತ (ರೂ.ಗಳಲ್ಲಿ) | ಬಾಕಿ ಇರುವ ಮೊತ್ತ (ರೂ.ಗಳಲ್ಲಿ) |
|---|---|---|---|---|
| **ದಕ್ಷಿಣ ಕನ್ನಡ ಜಿಲ್ಲೆ** | | | | |
| 1 | ಮೂಡಬಿದ್ರೆ | 3,59,63,794.43 | 1,35,91,280.50 | 2,23,72,513.93 |
| 2 | ಪುತ್ತೂರು | 9,29,24,385.00 | 4,58,86,560.00 | 4,70,27,825.00 |
| 3 | ಬಂಟ್ವಾಳ | 3,01,57,583.00 | 26,01,822.00 | 2,75,55,761.00 |
| 4 | ಸುಳ್ಯ | 66,91,458.00 | 1,50,495.50 | 65,40,962.50 |
| **ಉಡುಪಿ ಜಿಲ್ಲೆ** | | | | |
| 5 | ಕಾಪು | 5,34,10,847.94 | 61,78,091.37 | 4,72,32,756.56 |
| 6 | ಕುಂದಾಪುರ | 4,52,21,809.00 | 1,77,74,504.00 | 2,74,47,305.00 |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.